R No KKNN 12 13-3-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಕ್ಷಿ ಪ್ರಕಾರ ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಶ್ರೀ ರವಿಂ ಎಂ ಎಸ್. ಕೃಷ್ಣರಾವ್ [3 ಪೈಸೆ

ಪೋಲೆಂಡ್‌ನಿಂದ ಭಾರತಕ್ಕೆ ಗೊಬ್ಬರ ಸರಬರಾಜು

ಸಿಟಿ ಮುನಿಸಿಪಲ್ ಆಫೀಸ್
ಮೈಸೂರು ತಾ : 7-3-74
ನಂ. ಸಿ.ಪಿ.ಆರ್. 138 / 73-74

ಅಬ್‌ಸ್ಟ್ರಾಕ್ಟ್ ಟೆಂಡರ್

ನೋಟಿಫಿಕೇಷನ್

ಈ ಕೆಳಗೆ ನಮೂದಿಸಿರುವ ಕಂಟ್ರಾಕ್ಟ್ ಬಾಬಿಗಾಗಿ 1974-75 ನೇ ಸಾಲಿಗೆ ಅಂದರೆ ತಾ. 1-4-1974 ರಿಂದ 31-3-1975 ರವರೆಗೆ ತಾ. 22-3-74 ನೇ ಶುಕ್ರವಾರ ಮಧ್ಯಾಹ್ನ 4 ಘಂಟೆಯವರೆಗೆ ಮುನಿಸಿಪಲ್ ಕಮೀಷನರ್ ರವರಿಂದ ಸೀಲಾದ ಟೆಂಡರನ್ನು ಸ್ವೀಕರಿಸಲಾಗುತ್ತೆ. ಇಷ್ಟವುಳ್ಳವರು ಒಂದುನೂರೈವತ್ತು ರೂಪಾಯಿಗಳನ್ನು ಮುನಿಸಿಪಲ್ ಖಜಾನೆಗೆ (ಎಕ್ಸ್‌ಟೆನ್ಷನ್ ಕೌಂಟರ್ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಿಟಿ ಮುನಿಸಿಪಾಲಿಟಿ, ಮೈಸೂರು) ಇನಿಷಾಲ್ ಮಾಡಿದ ಚಲನ್ ಲಗತ್ತಿಸಿ ಸೀಲಾದ ಕವರಿನಲ್ಲಿ ತಮ್ಮ ಅತೀ ಕಡಮೆ ದರವನ್ನು (ಲೋಡಿಂಗ್ ಮತ್ತು ಅನ್‌ಲೋಡಿಂಗ್ ಛಾರ್ಜುಸೇರಿ) ನಮೂದಿಸಿ ಶಕಾಲಕ್ಕೆ ಕೊಡಬಹುದು ವಿವರಗಳನ್ನು ಆಫೀಸ್ ವೇಳೆಯಲ್ಲಿ ತಿಳಿಯಬಹುದು. ಮತ್ತು ಆಫೀಸ್ ನೋಟೀಸ್ ಬೋರ್ಡಿನಲ್ಲಿ ನೋಡಬಹುದು.

— ಕಂಟ್ರಾಕ್ಟ್ ಬಾಬತ್ —

ಎಣ್ಣೆ, ಡ್ರಂಗಳು, ಟಾರ್‌ಡ್ರಂಗಳು, ಸೀಮೆಂಟ್, ಕಬ್ಬಿಣ, ಸ್ಟೇಷನರಿ ವಗೈರೆ ರೈಲ್ವೆ ಗುಡ್ಸ್‌ಶೆಡ್ ಮತ್ತು ಲಾರಿ ಗೂಡ್ಸ್‌ನಿಂದ ಭತಿ ಮಾಡಿ ಸಾಗಿಸಿ ಮುನಿಸಿಪಲ್ ಸ್ಟೋರ್ಸ್‌ನಲ್ಲಿ ಮತ್ತು ಪೀಪಲ್ಸ್ ಪಾರ್ಕ್‌ನಲ್ಲಿ ಇಳಿಸುವುದು.

(ಸಹಿ) ಎಸ್. ಸ್ವತಂತ್ರರಾವ್,
ಮುನಿಸಿಪಲ್ ಕಮೀಷನರ್

ದಿನ್ಯವಾಣಿ

ರಾಜಕೀಯವನ್ನು ಒಂದು ವೃತ್ತಿಯಾಗಿ ಅವಲಂಬಿಸಿರುವ ಸ್ವಾತಂತ್ರ್ಯಾನಂತರದ ಪೀಳಿಗೆಯವರಿಗೆ ಇದು ಅರ್ಥವಾಗಲಾರದು. —ಹೋವ್

ಸೊಳ್ಳೆಕಾಟವಿಲ್ಲದ ಬೆಂಗಳೂರು

★

ಬೆಂಗಳೂರು— ವೃಷಭಾವತಿಯಲ್ಲಿನ ಹೊಸ ಹೊಲಸು ಸಂಸ್ಕರಣದ ಯಂತ್ರಾಗಾರದಿಂದ "ಸೊಳ್ಳೆಗಳಿಲ್ಲದ ಬೆಂಗಳೂರು' ಆಗುವ ಆಶಯವನ್ನು ಗೌರ್ನರ್ ರವರು ವ್ಯಕ್ತಪಡಿಸಿದ್ದಾರೆ.

ಸಿಟಿ ಮುನಿಸಿಪಲ್ ಆಫೀಸ್
ಮೈಸೂರು ದಿನಾಂಕ : 7-3-74
ನಂ ಸಿ.ಪಿ.ಆರ್.134 / 73-74

ಅಬ್‌ಸ್ಟ್ರಾಕ್ಟ್
ಟೆಂಡರ್ ನೋಟಿಫಿಕೇಷನ್

ಈ ಮೂಲಕ ತಿಳಿಯಪಡಿಸುವುದೇನೆಂದರೆ, 1974-75 ನೇ ಸಾಲಿಗೆ ಅಂದರೆ ತಾ. 1-4-1974 ರಿಂದ 31-3-1975 ರ ಅಪ್ರಿಲ್‌ವರೆವಿಗೆ ಮೈಸೂರು ಪುರಸಭೆಯ ಮರಾಮತ್ ಇಲಾಖೆಯ ಉಪಯೋಗಕ್ಕಾಗಿ ಬೇಕಾಗುವ 30 ಮೆಟ್ರಿಕ್ ಟನ್ ಕಾಡು ಮರದ ಸೀಳಿದ ಪೌಪೆಯನ್ನು ಸರಬರಾಜು ಮಾಡಲು ಸೀಲಾದ ಟೆಂಡರುಗಳನ್ನು ಶುಕ್ರವಾರ ತಾ. 22-3-1974 ರ ದಿನದ ಮಧ್ಯಾಹ್ನ 4 ಘಂಟೆಯವರಿಗೆ ಮುನಿಸಿಪಲ್ ಕಮೀಷನರ್‌ರವರಿಂದ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ಒಂದುನೂರು ರೂಪಾಯಿ ಟೆಂಡರ್ ಡಿಪಾಜಿಟ್ಟನ್ನು ಮುನಿಸಿಪಲ್ ಖಜಾನೆಗೆ (ಎಕ್ಸ್‌ಟೆನ್ಷನ್ ಕೌಂಟರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಿಟಿ ಮುನಿಸಿಪಾಲಿಟಿ, ಮೈಸೂರು) ಪಾವತಿ ಮಾಡಿದ ಚಲನ್ ಲಗತ್ತಿಸಿ ತಮ್ಮ ಟೆಂಡರುಗಳನ್ನು ಕೊಡಬಹುದು ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಪಡೆಯಬಹುದು. ಮತ್ತು ನೋಟೀಸ್ ಬೋರ್ಡಿನಲ್ಲಿ ಕಾಣಬಹುದು

(ಸಹಿ) ಎಸ್ ಸ್ವತಂತ್ರರಾವ್
ಮುನಿಸಿಪಲ್ ಕಮೀಷನರ್

ಅಕ್ಕಿ ಭತ್ತ ವಶ

ಚಂಗಲ್ಪಟ್ ಜಿಲ್ಲಾಕೇಂದ್ರ ಮತ್ತು ಉತ್ತರಾಮೆರೂರಿನಲ್ಲಿ ಸರಿಯಾದ ರಹದಾರಿ ಇಲ್ಲದೆ ಸಾಗಿಸಲಾಗುತ್ತಿದ್ದ 100 ಮೂಟೆ ಅಕ್ಕಿ 100 ಮೂಟೆ ಭತ್ತವನ್ನು ಸಿವಿಲ್ ಸಪ್ಲೈಸ್ ನವರು ವಶಪಡಿಸಿಕೊಂಡರು

★

ವಿಗ್ರಹಗಳು ಸಿಕ್ಕಿದವು

ತಂಜಾವೂರು ಪಾರನಾಶಂ ತಾಲ್ಲೂಕಿನ ಕಳಂಜಿರಿ ಗ್ರಾಮದಲ್ಲಿಯ ಒಂದು ಶಿವದೇವಾಲಯದಲ್ಲಿ ಕಳುವಾಗಿದ್ದ ರೂ 2 ಲಕ್ಷ ಬೆಲೆಯ ಮೂರು ಪಂಚಲೋಹ ವಿಗ್ರಹಗಳನ್ನು ಪೋಲೀಸರು ವಶಪಡಿಸಿಕೊಂಡು 3 ಮಂದಿಯನ್ನು ಬಂಧಿಸಿದರು.

★

ಕೃಷ್ಣಾ ನೀರು

ಬೆಂಗಳೂರು— ಕೃಷ್ಣಾ ನೀರಿನ ನ್ಯಾಯಾಂಗ ನ್ಯಾಯಮಂಡಲಿ ತೀರ್ಪಿನ ಬಗ್ಗೆ ಸರಕಾರ ಅಪೀಲು ಮಾಡಲಿದೆ.

ಪ್ರಧಾನಿಯವರ ವಿಷಾದ

ನವದೆಹಲಿ— ಗುಜರಾತು ಸಮಸ್ಯೆಯ ಬಗ್ಗೆ ಶ್ರೀ ಸೇನಾರಾಜ್ ದೇಸಾಯರವರು ಉಪವಾಸಕ್ಕೆ ಕೂತಿರುವ ಬಗ್ಗೆ ಪ್ರಧಾನಿ ಇಂದಿರಾರವರು ವಿಷಾದ ವ್ಯಕ್ತಪಡಿಸಿದ್ದಾರೆ

ಹೊರಬೀಳಲು ಕಾರಣ

ನವದೆಹಲಿ— ಭಾರತದ ಆರ್ಥಿಕತೆಯ ಆಳಗೊಳ್ಳುತ್ತಿರುವ ಉತ್ಕಟತೆಯ ವರದಿ ಹೊರಬೀಳಲು ತಮ್ಮ ಅಧಿಕಾರಿಗಳು ಜವಾಬ್ದಾರರೆಂಬುದನ್ನು ವಿಶ್ವ ಬ್ಯಾಂಕು ನಿರಾಕರಿಸಿದೆಯೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

●

ವಿಧಾನ ಪರಿಷತ್ತಿನಲ್ಲಿ

ಬೆಂಗಳೂರು— ವಿಧಾನ ಪರಿಷತ್ತಿನಲ್ಲಿ, ಸರಕಾರದ ಅನಾವಶ್ಯಕ ಖರ್ಚುಗಳನ್ನು ತಗ್ಗಿಸಲು ಒಂದು ಮಿತವ್ಯಯ ಸಮಿತಿ ಸ್ಥಾಪನೆಗೆ ಶಿಫಾರಸು ಮಾಡಲಾಯಿತು — ಉದ್ಯೋಗ ಸವೀಕರಿಸಲು ವಿದ್ಯಾಭ್ಯಾಸದಲ್ಲಿ ಮೂಲಭೂತ ಬದಲಾವಣೆಯಾಗಬೇಕೆಂಬ, ಚಲಚಿತ್ರಮಂದಿರದ ತೆರಿಗೆ ಹೆಚ್ಚಿಸಿರುವ, ಸಿನೀಮಾಮಂದಿರಗಳ ರಾಷ್ಟ್ರೀಕರಣ ಮಾಡಬೇಕೆಂಬ, ತಾಲ್ಲೂಕು ಬೋರ್ಡು ಅಧ್ಯಕ್ಷರುಗಳನ್ನು ಸರ್ಕಾರ ನಾಮಕರಣ ಮಾಡಬೇಕೆಂಬ, ವಿಜಯನಗರ ಉಕ್ಕು ಯೋಜನೆಯ ಕಾರ್ಖಾನೆಯ ತಡವಾಗಿರುವ ಪ್ರಗತಿ ಬಗ್ಗೆ ಕೇಳಲಾಯಿತು

★

ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ

ಮೈಸೂರು— ಮೇಲ್ಕಂಡ ಮಂದಿರದಲ್ಲಿ ಇದೇ ಆನಂದನಾಮ ಸಂವತ್ಸರದ ಚೈತ್ರ ಶುದ್ಧ ನವಮಿ ಸೋಮವಾರ ತಾ. 1-4-74 ರಿಂದ 13-4-74 ರ ಪೂರ್ತ ನಡೆಯುವ ರಾಮೋತ್ಸವದ ಅಂಗವಾಗಿ ಶಾಸ್ತ್ರೋಕ್ತವಾದ ಪೂಜಾದಿ ಕಾರ್ಯಕ್ರಮಗಳು ಮತ್ತು ಸಂಗೀತ ಕಛೇರಿಗಳನ್ನು ಏರ್ಪಡಿಸಿರುತ್ತೆ.

●

ನವದೆಹಲಿ— ಪೋಲೆಂಡು ಭಾರತಕ್ಕೆ ಈ ವರ್ಷ 200000 ಟನ್ ಯುರಿಯಾ, 30000 ಟನ್ ರಸಾಯನಿಕ ಗೊಬ್ಬರ, 16000 ಟನ್ ಗಂಧಕವನ್ನು ಸರಬರಾಜು ಮಾಡಲಿದೆ

ಗುರು ಗೋವಿಂದ ಸಿಂಗ್

ಗುರು ಗೋವಿಂದಸಿಂಗ್‌ರವರು ಗುರು ನಾನಕ್‌ರವರ ಎರಡು ಶತಮಾನಗಳ ನಂತರ ಬಂದರು. ಅವರ ಜೀವಿತವು ಆಶ್ಚರ್ಯ ವಿಷಯಗಳಿಂದ ಕೂಡಿದುದಾಗಿದೆ ; ಅದೊಂದು ಸಾಹಸದ ಕಥೆ ; ತನ್ನ ಜೀವಕ್ಕಿಂತ ಧರ್ಮ ಹೆಚ್ಚೆಂದು ತೋರಿಸುತ್ತಾರೆ. 6 ನೇ ಗುರು ಹರಿಗೋವಿಂದ್‌ರವರು ಆಯುಧವನ್ನು ಹಿಡಿಯಲು ವಿನಂತಿಸಿದ ಪ್ರಥಮ ಗುರು ; 10 ನೇ ಗುರು ಗೋವಿಂದಸಿಂಗ್‌ರವರು ಸೈನ್ಯಕ್ಕೆ ಒಂದು ಧರ್ಮ ಪ್ರಚಾರಕ ಧ್ಯೇಯ ಕೊಟ್ಟರು.—

" ಸಕಾಳ್ ಜಗತ್ ಖಾಲ್ಸಾ ಪಂಥ್ ಗಜೆ
ಜೆಗೇ ಧರ್ಮ ಹಿಂದೂ ಸಕಾಳ್ ಭಂದ್ ಭಜೆ "

[ಖಾಲ್ಸಾ ವಿಶ್ವದಲ್ಲಿ ಪ್ರಾಬಲ್ಯಗೊಳ್ಳಲಿ, ಹಿಂದೂ ಧರ್ಮ ಜಾಗೃತಗೊಳ್ಳಲಿ ಎಲ್ಲಾ ಕೋಡಂಗಿಗಳೂ ಕಾಣದಂತಾಗಲಿ]

ಗುರು ಗೋವಿಂದ್‌ಸಿಂಗ್‌ರಿಗೆ ಶರಣಾಗತವಾಗುವಂತೆ ಔರಂಗಜೇಬ್ ಖುರಾನ್ ಪತ್ರಕ್ಕೆ, ಗುರು ಬರೆದ ಜಫರನಾಮಾ (ವಿಜಯ ಪತ್ರ)ದಲ್ಲಿ ಹೀಗೆ ತಿಳಿಸಿದರು—

" ಇಗೋ ನೋಡು, ನೀನು ನನಗೆ ಎಷ್ಟು ಅನ್ಯಾಯ ಮಾಡಿರುವಿ. ನೀನು ಮೊದಲು ನನ್ನ ತಂದೆ ಗುರು ತೇಜ್ ಬಹದ್ದೂರ್‌ರನ್ನು ಬಂಧಿಸಿದೆ, ಮತ್ತು ಆತನನ್ನು ಕೊಂದೆ ; ನಂತರ ನನ್ನ ಮೇಲೆ ಸೈನ್ಯ ಕಳುಹಿಸಿದೆ ; ನಂತರ ನನ್ನ ಚಿಕ್ಕ ಮಕ್ಕಳನ್ನೂ ಮತ್ತು ಸಹಸ್ರಾರು ಶಿಷ್ಯರನ್ನೂ ಕೊಂದೆ ; ನನ್ನ ಪತ್ನಿಯರನ್ನು ಕೊಂದೆ ; ಮತ್ತು ನನ್ನ ಖಜಾನೆಯನ್ನು ಲೂಟಿ ಮಾಡಿದೆ. ಎಚ್ಚರಿಕೆಯಿಂದಿರು ! ನೀನು ಜನರ ಮೇಲೆ ಹೆಚ್ಚಾಗಿ ದಬ್ಬಾಳಿಕೆ ಮಾಡಿರುವುದರಿಂದ, ಖಾಲ್ಸಾ ನಿನ್ನನ್ನು ಹೊಗೇಸೊಡಿಸುವುದು ; ನಿನ್ನ ಪ್ರತೀಕಾರದ ದಿನ ಈಗ ಬಂದಿದೆ ; ದೇವರು ನಿನ್ನ ವಿಷಯದಲ್ಲಿ ತುಂಬಾ ಕ್ರೋಧಗೊಂಡಿದ್ದಾನೆ ; ನಾನು ದೇವರ ಸಹಾಯದಿಂದ ನಿನ್ನ ಮೇಲೆ ಸೇಡುತೀರಿಸಿಕೊಳ್ಳುತ್ತೇನೆ ". ಔರಂಗಜೇಬ್‌ನನ್ನು ಮತ್ತೂ ಕೆಣಕಿ, ಅವನ ಕೆಟ್ಟಚಾಳಿಯ ವಿಗ್ರಹಚ್ಛೇದಕ ಉತ್ಸಾಹ ಬಗ್ಗೆ ಎಚ್ಚರಿಕೆ ನೀಡಿ " ನೀನು ಡೇವಾಲಯಗಳನ್ನು ನಾಶಮಾಡಿರುವೆ ; ಇದಕ್ಕಾಗಿ ಪ್ರತಿ ಹಿಂದೂ ತನ್ನ ಮನೆಯಲ್ಲಿ ಒಂದೊಂದು ವಿಗ್ರಹ ಇಟ್ಟುಕೊಂಡಿದ್ದಾನೆ ; ನೀನು ಅವರನ್ನು ಸಂಕಟಪಡಿಸಲು ಆಶಯಗೊಂಡಿರುವಾಗ, ದೇವರು ನಿನ್ನ ಮೇಲೆ ಯಾಕೆ ದಯತೋರಿಸಬೇಕು " ಎಂದೂ ತಿಳಿಸಿದರು.

ವುಡ್‌ಲಾಂಡ್ಸ್ 15 3 74 ರಿಂದ

ಅವೋಫು 3 ನೇ ವಾರ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಪ್ರಾಣ್, ನವೀನ್ ನಿಶ್ಚಲ್, ರೇಖ

ದಿನ 3 ಪ್ರದರ್ಶನಗಳು

★

ಅಪೆರಾ 3 ನೇ ವಾರ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ

ಕಥೆ – ನಿರ್ಮಾಪಕ : ಗೋಪಿ ಸಂಗೀತ : ಆರ್. ರತ್ನ

ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಸತ್ಯನಾರಾಯಣ

ದಿನ 3 ಪ್ರದರ್ಶನಗಳು.

Contribute Liberally
to the National Defence Fund

SHAKTI SUDHA

A Superb Tonic

Help The Gorakshana

— HumanitarianPropoganda Monthly ....

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore